ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು): ಕರ್ನಾಟಕ ಭೂ ಕಂದಾಯ ಕಾಯಿದೆ ಉಪ ಕಲಂ (4) ಕಲಂ 94ಎ ಪ್ರಕಾರ ದಿನಾಂಕ: 20-3-91ರಿಂದ (ಅಂದರೆ ತಿದ್ದುಪಡಿ ಕಾಯ್ದೆ ಜಾರಿಗೆ ಬಂದ ದಿನಾಂಕದಿಂದ) ಸರ್ಕಾರಿ ಜಮೀನುಗಳ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ಅರ್ಜಿಗಳನ್ನು ಸಲ್ಲಿಸಲು 6 ತಿಂಗಳು ಕಾಲಾವಕಾಶವನ್ನು ನೀಡಲಾಗಿತ್ತು. ಇದರ ಕೊನೆಯ ದಿನಾಂಕ : 19-9-91 ಆಗಿರುತ್ತದೆ. ಅರ್ಜಿಗಳನ್ನು ಸ್ವೀಕೃತ ಮಾಡಲು ಕೊನೆಯ ದಿನಾಂಕದ ಬಗ್ಗೆ ಸಾಕಷ್ಟು ಪ್ರಚಾರವನ್ನು ಸಹ ಮಾಡಲಾಗಿತ್ತು. ಸುಮಾರು 25,80,214 ಎಕರೆಯ ಬಗರ್‌ಹುಕುಂ ಸಾಗುವಳಿಯ ಜಮೀನನ್ನು ಸಕ್ರಮಗೊಳಿಸಲು ದಿನಾಂಕ : 19-9-91ರವರೆಗೆ ಒಟ್ಟು · 10,86,826 ಅರ್ಜಿಗಳು ಸ್ವೀಕೃತವಾಗಿರುತ್ತದೆ. ಈ ಬಗ್ಗೆ ಸರ್ಕಾರವು ಸುಮಾರು 3 ಲಕ್ಷದಷ್ಟು ಅರ್ಜಿಗಳು ಸ್ವೀಕೃತವಾಗುವಂದೆಂದು ಯೋಚಿಸಲಾಗಿತ್ತು. ಆದರೆ ವಾಸ್ತವಿಕವಾಗಿ ಬಂದಿರುವ ಅರ್ಜಿಗಳು ಯೋಚಿಸಲಾದ 3 ಲಕ್ಷ ಅರ್ಜಿಗಳಿಗಿಂತ ಜಾಸ್ತಿ ಸ್ವೀಕೃತವಾಗಿರುವುದರಿಂದ ನಿಗದಿಪಡಿಸಲಾದ ಅವಧಿಯನ್ನು ಮುಂದೆ ವಿಸ್ತರಿಸಲು ಸೂಕ್ತವಲ್ಲ.

ಕರ್ನಾಟಕ ಭೂಕಂದಾಯ ಕಾಯಿದೆ ಕಲಂ 94ಎ ಪ್ರಕಾರ ಅರಣ್ಯ ಜಮೀನುಗಳನ್ನು ಪ್ಲಾಂಟೇಷನ್ ಜಮೀನುಗಳನ್ನು ಅಥವಾ ಉಪಕಲಂ 9(2) ಕಲಂ 79ರ ಅಡಿಯಲ್ಲಿ ಬರುವ ಜಮೀನುಗಳನ್ನು ಸಕ್ರಮಗೊಳಿಸಲು ಅವಕಾಶ ಇರುವುದಿಲ್ಲ. ಕರ್ನಾಟಕ ಭೂಕಂದಾಯ ಕಾಯಿದೆ ಕಲಂ 79(2)ರ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕುಂಕಿ, ಬಾನೆ, ಮತ್ತು ಖಾನು, ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಬೆಟ್ಟ ಮತ್ತು ಹಾಡಿ ಜಮೀನುಗಳು, ಮೈಸೂರು ಪ್ರದೇಶದಲ್ಲಿರುವ ಖಾನು, ಸೊಪ್ಪಿನ ಬೆಟ್ಟ ಹಾಗೂ ಕೊಡಗು ಜಿಲ್ಲೆಯಲ್ಲಿರುವ ಜಮ್ಮ ಮತ್ತು ಬಾನೆ, ಜಮೀನುಗಳು ವಿಶೇಷ ಹಕ್ಕುಗಳ ಜಮೀನುಗಳಾಗಿರುತ್ತವೆ. ಈ ಜಮೀನುಗಳು ಮೂಲತಃ ಸೇಡಾ ಜಮೀನುಗಳಾಗಿದ್ದು ತರಿ ಜಮೀನನ್ನು ಹೊಂದಿರುವ ಮಾಲೀಕರಿಗೆ ಅನುಕೂಲವಾಗುತ್ತದೆ.

ಈ ವಿಶೇಷ ಹಕ್ಕುಳ್ಳ ಜಮೀನುಗಳ ಹಕ್ಕನ್ನು ಮುಂದುವರಿಸಲು ಅಥವಾ ನಿಷೇಧಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ. ಆದುದರಿಂದ ಸದರಿ ಜಮೀನನ್ನು ಸಕ್ರಮಗೊಳಿಸಲು ಬರುವುದಿಲ್ಲ. ಹಾಗೆಯೇ ಬೆಂಗಳೂರು ನಗರ ಪಾಲಿಕೆ ಸರಹದ್ದಿನಿಂದ 18 ಕಿಲೋ ಮೀಟರ್, ಇತರೆ ನಗರ ಪಾಲಿಕೆಗಳ ಸರಹದ್ದಿನಿಂದ 10 ಕಿಲೋ ಮೀಟರ್ ಮತ್ತು ಪುರಸಭೆ ಸರಹದ್ದಿನಿಂದ 5 ಕಿಲೋಮೀಟರ್ ಒಳಗೆ ಬಂದ ಸರ್ಕಾರಿ ಜಮೀನುಗಳನ್ನು ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ 94ಎ ಪ್ರಕಾರ ಸಕ್ರಮಗೊಳಿಸಲು ಸಹ ಇರುವುದಿಲ್ಲ.

11.50 ಎ.ಎಂ.

ಮನೆ ಕಂದಾಯ ವಸೂಲಾತಿಗೆ ನೀತಿ ನಿಯಮ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅಧ್ಯಕ್ಷಣಿಯವರೆ, ಕರ್ನಾಟಕ ರಾಜ್ಯದಲ್ಲಿ ಮನೆ ಕಂದಾಯ ವಸೂಲಿ ಮಾಡಲು . ಯಾವ ನೀತಿ-ನಿಯಮ ಕೂಡ ಇರುವುದಿಲ್ಲ. ನೀತಿ-ನಿಯಮ ರೂಪಿಸಲು ಸರ್ಕಾರ ನೇಮಿಸಿರುವ ಸಮಿತಿ ಎಂದು ನೇಮಿಸಲ್ಪಟ್ಟಿತು? ಇದುವರೆಗೆ ಎಷ್ಟು ಸಭೆಗಳನ್ನು ನಡೆಸಲಾಗಿದೆ?

ಯಾವುದಾದರೂ ನೀತಿ-ನಿಯಮ ರೂಪಿಸಿದ್ದಾರೆಯೇ? ರೂಪಿಸಿದ್ದರೆ ಯಾವುವು? ರೂಪಿಸಿಲ್ಲದಿದ್ದರೆ, ಯಾವ ದಿನಾಂಕದೊಳಗೆ ರೂಪಿಸಲಾಗುವುದು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು): ಸದರಿ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಮಂಡ್ಯದ ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯಲ್ಲಿ ಹೆಚ್ಚಳ.

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಅಧ್ಯಕ್ಷಿಣಿಯವರೇ, ಮಂಡ್ಯ ದಲ್ಲಿರುವ ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಗೆ ಮಾಡಬೇಕಾದುದು ತುಂಬಾ ಅವಶ್ಯಕವಾಗಿದೆ ಮತ್ತು ಅನಿವಾರ್ಯವಾಗಿದೆ. ಈ ದಿಸೆಯಲ್ಲಿ ಸಾರ್ವಜನಿಕರು ಹಾಗೂ ಚುನಾಯಿತ ಪ್ರತಿನಿಧಿಗಳು ಸರ್ಕಾರಕ್ಕೆ ಮನವಿಯನ್ನು ಸಹ ಮಾಡಿದ್ದಾರೆ. ಮಂಡ್ಯ ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಗೆ ಮಾಡಬೇಕೆಂಬ ಕೋರಿಕೆಯ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾವನೆ ಇದ್ದು, ಈ ಪ್ರಸ್ತಾವನೆಗೆ ಸರ್ಕಾರದ ಮಂಜೂರಾತಿ ದೊರಕಬೇಕಾಗಿದೆ. ಜಿಲ್ಲಾ ಆಸ್ಪತ್ರೆಯು ಅಭಿವೃದ್ಧಿ ಯಾಗದಿದ್ದರೆ ಜನ ಸಾಮಾನ್ಯರಿಗೆ ತೊಂದರೆಯಾಗುವುದು ಸಹಜ. ಆದ ಕಾರಣ, ಈ ವಿಷಯದಲ್ಲಿರುವ ಪ್ರಸ್ತಾವನೆಗೆ ಸರ್ಕಾರದ ಮಂಜೂರಾತಿ ನೀತಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಶೀಘ್ರಕಾಮಗಾರಿ ಪ್ರಾರಂಭಿಸಲು ಆದೇಶ ನೀಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ.

ಮಂಡ್ಯ ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಈಗ ಹಾಲಿ 250 ಹಾಸಿಗೆಗಳು ಇದ್ದು ಇಲ್ಲಿ ಔಷಧ ವಿಭಾಗ, ಶಸ್ತ್ರ ಚಿಕಿತ್ಸಾ ವಿಭಾಗ, ಸ್ತ್ರೀರೋಗ ಚಿಕಿತ್ಸಾ ವಿಭಾಗ, ಮಕ್ಕಳ ವಿಭಾಗ, ಅಸ್ಥಿ ಚಿಕಿತ್ಸಾ ವಿಭಾಗ, ಚರ್ಮರೋಗ ಚಿಕಿತ್ಸಾ ವಿಭಾಗ, ಕಿವಿ, ಮೂಗುಗಂಟಲು ವಿಭಾಗ, ದಂತ ಚಿಕಿತ್ಸಾ ವಿಭಾಗ, ಆರ್ಥ ಪೆಡಿಕ್ಸ್ ವಿಭಾಗ ಮತ್ತು ದಂತ ಚಿಕಿತ್ಸಾ ವಿಭಾಗ ಸೇವಾ ಸೌಲಭ್ಯಗಳು ಲಭ್ಯವಿರುತ್ತವೆ. ಮತ್ತೆ ಪ್ರತಿದಿನ 300 ಸೀಸೆಗಳ ಐ.ವಿ. ದ್ರಾವಣ ತಯಾರಿಸುವ ಘಟಕ, ಕ್ಷ-ಕಿರಣ, ವೀಡಿಯೋ ಎಂಡೋಸ್ಕೋಪ್ ವ್ಯವಸ್ಥೆ , ಪ್ರಯೋಗಶಾಲೆ ಮುಂತಾದ ಸೌಲಭ್ಯಗಳಿವೆ. ಮಂಡ್ಯ ಸಾರ್ವಜನಿಕ ಆಸ್ಪತ್ರೆಯ ಹಾಲಿ ಇರವ ಹಾಸಿಗೆಯ ಸಂಖ್ಯೆಯು ಇಲ್ಲಿಗೆ ಬರುವ ರೋಗಿಗಳ ಸೇವೆಗೆ ಸಾಲದಾಗಿರುವುದಿಲ್ಲ. ಎಂಬಲಿಂಶ ಸಾರ್ವಜನಿಕರಿಂದೇ ಮತ್ತು ಚುನಾಯಿತ ಪ್ರತಿನಿಧಿಗಳಿಂದ ಸರ್ಕಾರದ ಗಮನಕ್ಕೆ ಬಂದಿದ್ದು ಈ ವಿಷಯದ ಬಗ್ಗೆ ಪರಿಶೀಲಿಸಲು ಮಂಡ್ಯ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ, ಆ ಸಮಿತಿಯ ವಿಷಯಗಳನ್ನು ಪರಿಶೀಲಿಸಿ ಈ ಆಸ್ಪತ್ರೆಯ ಹಾಸಿಗೆ ಸಂಖ್ಯೆಯನ್ನು ಹೆಚ್ಚಿಸಲು ಶಿಫಾರಸ್ಸು ಮಾಡಿರುತ್ತದೆ. ಹಣದ ಲಭ್ಯತೆಯನ್ನು ಆಧರಿಸಿ ಸದರಿ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

8. ಗುಲ್ಬರ್ಗ ಬೀದರ್ ಹಾಗೂ ರಾಯಚೂರು ಜಿಲ್ಲೆಯಲ್ಲಿ 133 ಕಾರ್ಮಿಕರನ್ನು ಸಾರಿಗೆ ಸಂಸ್ಥೆಯಲ್ಲಿ ನೇಮಕ ಮಾಡುವಂತೆ ಒತ್ತಾಯ